


# ರ್ಯಾಪ್ ರಾಜಕುಮಾರಿ

■ ಪ್ರವೀಣ ಕುಲಕರ್ಣಿ

ಜಾನಪದ ಶೈಲಿಯ ಹಿತವಾದ ಸಂಗೀತದ ನಡುವೆ 'ಮನಿಕೆ ಮಗೆ ಹಿತೆ' ಎಂಬ ಸಿಂಹಳೀಯ ಹಾಡು ಅಲೆ ಅಲೆಯಾಗಿ ತೇಲಿ ಬರುತ್ತಿದ್ದರೆ ಯಾರಿಗೇ ಆಗಲಿ, ಹೆಜ್ಜೆ ಹಾಕದಿರಲು ಸಾಧ್ಯವೇ ಇಲ್ಲ. ಆ ಹಾಡಿನ ಹಿಮ್ಮೇಳದೊಂದಿಗೆ ನಮ್ಮ ಮೈಸೂರಿನ ಅರಮನೆ ಎದುರೋ, ಚೆನ್ನೈನ ಬೀಚ್‌ನ ಮುಂದೆಯೋ ಅಥವಾ ಮುಂಬೈನ ಗೇಟ್ ವೇ ಆಫ್ ಇಂಡಿಯಾದ ಎದುರೋ ಕುಣಿಯುತ್ತಾ ವಿಡಿಯೊ ಮಾಡುವ ಮಂದಿಗೆ ಲೆಕ್ಕವಿಲ್ಲ. ಹೀಗೆ ಉಪಖಂಡದ ಜನರನ್ನೆಲ್ಲ ತನ್ನ ಮಾದಕ ಧ್ವನಿಯ ಮೂಲಕ ಕುಣಿಸುತ್ತಿರುವ ಗಾಯಕಿ ಶ್ರೀಲಂಕಾದ ಯೊಹಾನಿ ಡಿಲೋಕಾ ಡಿ'ಸಿಲ್ವಾ!

ಯೊಹಾನಿಯ ಧ್ವನಿಗೆ ಹೆಜ್ಜೆ ಹಾಕಿದವರಲ್ಲಿ ಮಾಮೂಲಿ ಸಂಗೀತಪ್ರಿಯರು ಮಾತ್ರ ಸೇರಿಲ್ಲ. ಅಮಿತಾಬ್ ಬಚ್ಚನ್, ಟೈಗರ್ ಶ್ರಾಫ್, ಮಾಧುರಿ ದೀಕ್ಷಿತ್, ಪರಿಣೀತಿ ಚೋಪ್ರಾ ಮೊದಲಾದ ಸೆಲೆಬ್ರಿಟಿಗಳನ್ನೂ ಈ ಯುವ ಗಾಯಕಿ ಕುಣಿಸಿದ್ದಾಳೆ. 'ಮನಿಕೆ ಮಗೆ ಹಿತೆ' ಹಾಡನ್ನು ಈಗಾಗಲೇ ಹನ್ನೊಂದು ಕೋಟಿ ಮಂದಿ ಕೇಳಿದ್ದು, ಪ್ರತಿದಿನ ಈ ಸಂಖ್ಯೆ ಲಕ್ಷಗಟ್ಟಲೆ ಏರುತ್ತಲೇ ಇದೆ. ಅಬ್ಬಬ್ಬಾ, 28ರ ಹರೆಯದ ಯೊಹಾನಿ, ತನ್ನ ಯೂಟ್ಯೂಬ್ ಖಾತೆಗೆ ಈಗಾಗಲೇ 24.5 ಲಕ್ಷ ಚಂದಾದಾರರನ್ನು ಹೊಂದಿದ್ದಾಳೆ.

ಹುಡುಗನೊಬ್ಬ ಹುಡುಗಿಗೆ ಮಾಡುವ ಪ್ರೇಮ ನಿವೇದನೆಯ ಸಾಲುಗಳು ಈ ಹಾಡಿನಲ್ಲಿವೆ. ಇನ್ನೂ ಸರಳವಾಗಿ ಹೇಳುವುದಾದರೆ ಪಡ್ಡೆ ಹೈದನೊಬ್ಬ ಸುಂದರ ಯುವತಿಗೆ ತನ್ನ ಹೃದಯ ಕಳೆದುಕೊಂಡ ಪದ್ಯ ಇದು. ಜೇನು, ದುಂಬಿ ಎಂದೆಲ್ಲ ಹೇಳಿಕೊಂಡು ಸಾಗುವ ಈ ಗೀತೆಯಲ್ಲಿ ಅದ್ಭುತ ಎನ್ನುವಂತಹ ಸಾಹಿತ್ಯ ಏನಿಲ್ಲ. ಆದರೆ, ಅದಕ್ಕೆ ಶ್ರೀಲಂಕಾದ ಜಾನಪದ ಸಂಗೀತದ ಸ್ಪರ್ಶ ಇದೆ. ಯೊಹಾನಿ ಧ್ವನಿಯಲ್ಲಿ ಈ ಹಾಡಿಗೊಂದು ಬೇರೆಯದೇ ಸೊಗಸು ದಕ್ಕಿಬಿಟ್ಟಿದೆ. ಭಾರತೀಯ ಪ್ರಮುಖ ಟಿ.ವಿ. ಚಾನೆಲ್‌ಗಳು ಈಗ ಈ ಹುಡುಗಿಯನ್ನು ಸಂದರ್ಶಿಸಲು ಸಾಲುಗಟ್ಟಿ ನಿಂತಿವೆ. 'ಭಾರತದಲ್ಲಿ ಸಂಗೀತ ಕಛೇರಿ ನೀಡಲು ಹಾತೊರೆಯುತ್ತಿದ್ದೆ' ಎಂದೆನ್ನುವ ಯೋಹಾನಿಗೆ ಗುರುಗ್ರಾಮ ಮತ್ತು ಹೈದರಾಬಾದ್‌ನಲ್ಲಿ ಕಾರ್ಯಕ್ರಮ ನೀಡುವ ಅವಕಾಶವೂ ಒಲಿದು ಬಂದಿದೆ. 'ಭಾರತದಲ್ಲಿ ಹಾಡಲು ಹೋಗುತ್ತಿರುವುದನ್ನು ನನಗೆ ಈಗಲೂ ನಂಬಲಾಗುತ್ತಿಲ್ಲ' ಎಂದು ಕಣ್ಣು ಮಿಟುಕಿಸುತ್ತಾ ಹೇಳುತ್ತಾಳೆ ಆಕೆ.

ಮೂಲ ಸಿಂಹಳೀಯ ಭಾಷೆಯ ಈ ಹಾಡು ಹಿಂದಿ, ಗುಜರಾತಿ, ಬಂಗಾಳಿ, ಭೋಜಪುರಿ, ತಮಿಳು ಹಾಗೂ ಮಲೆಯಾಳಂ ಭಾಷೆಗಳಲ್ಲೂ ತರ್ಜುಮೆಗೊಂಡಿದ್ದು, ಆಯಾ ಭಾಷೆಗಳ ಹಾಡಿನ ಆವೃತ್ತಿಗಳೂ ಬಂದಿವೆ. ತಮಿಳು ಮತ್ತು ಮಲೆಯಾಳಂ ಭಾಷೆಗಳಲ್ಲಿ ಯೊಹಾನಿಯೇ ಹಾಡಿದ್ದಾಳೆ. 'ಈ ಹಾಡಿಗೆ ಸೆಲೆಬ್ರಿಟಿಗಳೇ ಹೆಜ್ಜೆ ಹಾಕುವುದಾದರೆ ನಿನ್ನ ಆಯ್ಕೆ ಯಾರು' ಎಂದು ಕೇಳಿದರೆ, 'ಟೈಗರ್ ಶ್ರಾಫ್ ಮತ್ತು ಜಾಕ್ವೆಲಿನ್ ಫೆರ್ನಾಂಡಿಸ್' ಎಂದು ಮರುಕ್ಷಣವೇ ಉತ್ತರ ನೀಡುತ್ತಾಳೆ. 'ಭಾರತದಲ್ಲಿ ನಿನ್ನ ಈ ಹಾಡು ಇಷ್ಟೊಂದು ಜನಪ್ರಿಯಗೊಳ್ಳಲು ಏನು ಕಾರಣ' ಎಂದು ಪ್ರಶ್ನಿಸಿದರೆ, ಆಗಲೂ ಅವಳ ಉತ್ತರ ಸಿದ್ಧ: 'ಅಮಿತಾಭ್ ಸರ್ ಸೇರಿದಂತೆ ಹಲವು ಸೆಲೆಬ್ರಿಟಿಗಳು ನನ್ನ ಹಾಡಿಗೆ ಹೆಜ್ಜೆ ಹಾಕಿ ಇನ್‌ಸ್ಟಾಗ್ರಾಂನಲ್ಲಿ ಶೇರ್ ಮಾಡಿಕೊಂಡಿದ್ದು.' ಅಂದಹಾಗೆ, ಎ.ಆರ್. ರೆಹಮಾನ್, ನೇಹಾ ಕಕ್ಕರ್ ಅವರ ಹಾಡೆಂದರೆ ಅವಳಿಗೆ ಪಂಚಪ್ರಾಣವಂತೆ.

ಯೊಹಾನಿ ತಂದೆ ಮೇಜರ್ ಜನರಲ್ ಪ್ರಸನ್ನ ಡಿ'ಸಿಲ್ವಾ ನಿವೃತ್ತ ಸೇನಾ ಅಧಿಕಾರಿ. ಅವಳ ತಾಯಿ ದಿನಿತಿ, ಶ್ರೀಲಂಕನ್ ಏರ್‌ಲೈನ್ಸ್‌ನಲ್ಲಿ ಗಗನಸಖಿ ಆಗಿದ್ದವರು. ಯೊಹಾನಿ ತಂಗಿ ಶಾವಿಂದ್ರಿ ವೈದ್ಯಕೀಯ ವಿದ್ಯಾರ್ಥಿನಿ. ತಂದೆ ಸೈನ್ಯಾಧಿಕಾರಿಯಾಗಿದ್ದ ಕಾರಣ ಕೊಲಂಬೊ ಸೇರಿದಂತೆ ಶ್ರೀಲಂಕಾದ ಹಲವು ಮಿಲಿಟರಿ ನೆಲೆಗಳಲ್ಲಿ ಆಕೆ ಬೆಳೆದಳು. ಬಾಲ್ಯದಲ್ಲೇ ಸಂಗೀತದ ಹುಚ್ಚು ಹಿಡಿಸಿಕೊಂಡು ದಿನಗಟ್ಟಲೆ ಅಭ್ಯಾಸ ನಡೆಸುತ್ತಿದ್ದಳು. ಈಜಿನಲ್ಲೂ ಮುಂದಿರುವ ಯೊಹಾನಿ, ಶಾಲಾ ಕ್ರೀಡಾಕೂಟಗಳಲ್ಲಿ ಹಲವು ಪದಕಗಳನ್ನೂ ಹೊತ್ತು ತಂದವಳು. ಲೆಕ್ಕಶಾಸ್ತ್ರದಲ್ಲಿ ಆಸ್ಟ್ರೇಲಿಯಾ ವಿಶ್ವವಿದ್ಯಾಲಯದಿಂದ ಪದವಿಯನ್ನೂ ಪಡೆದವಳು.

ರ್ಯಾಪ್ ಪ್ರವೀಣೆಯಾದ ಯೊಹಾನಿ, ಸ್ವತಃ ಹಾಡುಗಳನ್ನು ರಚಿಸಬಲ್ಲಳು. ಒಂದಾದ ಮೇಲೆ ಒಂದರಂತೆ ಸಂಗೀತದ ಆಲ್ಬಂಗಳನ್ನೂ ಹೊರತಂದವಳು. ಟಿಕ್‌ಟಾಕ್‌ನಿಂದಲೂ ಅವಳು ಹಲವು ದೇಶಗಳಲ್ಲಿ ಹೆಸರುವಾಸಿ. ಸಂಗೀತ ಸಾಧನಗಳ ಮಾರಾಟ ಸಂಸ್ಥೆಯನ್ನೂ ಮುನ್ನಡೆಸುತ್ತಿದ್ದಾಳೆ. ಚಿಕ್ಕ ವಯಸ್ಸಿನಲ್ಲೇ ಯಶಸ್ಸಿನ ಕುದುರೆಯ ಬೆನ್ನೇರಿ ಹೊರಟಿರುವ ಯೊಹಾನಿಗೆ ಶ್ರೀಲಂಕಾದಲ್ಲಿ ಬೇರೆ ಯಾವ ಸಂಗೀತ ಕಲಾವಿದರಿಗೂ ಇಲ್ಲದಷ್ಟು ಸೋಶಿಯಲ್ ಮೀಡಿಯಾ ಫಾಲೋವರ್‌ಗಳು ಇದ್ದಾರೆ.

ಬಾಲಿವುಡ್ ಕುರಿತು ವಿಶೇಷ ಆಸಕ್ತಿ ತಾಳಿರುವ ಯೊಹಾನಿ, ಈಗ ಭಾರತದ ಜೈತ್ರಯಾತ್ರೆ ಆರಂಭಿಸಿದ್ದು, ಜಾಕ್ವೆಲಿನ್‌ನಂತೆ ಅವಳೂ ಹಿಂದಿ ಚಿತ್ರರಂಗದ ಹೃದಯ ಗೆದ್ದರೆ ಅಚ್ಚರಿಯಿಲ್ಲ. ಹಲವು ನಿರ್ಮಾಪಕರು ಈ ಹುಡುಗಿಯಿಂದ ಹಾಡಿಸಲು ಹಾತೊರೆಯುತ್ತಿದ್ದಾರೆ ಎನ್ನುವ ಸುದ್ದಿಯೂ ಇದೆ. 'ಮನಿಕೆ ಮಗೆ ಹಿತೆ' ಗೀತೆ ಮಾತ್ರ ಪ್ರತಿದಿನ ಲೆಕ್ಕವಿಲ್ಲದಷ್ಟು ಸಲ ಯೂಟ್ಯೂಬ್‌ನಲ್ಲಿ ಪ್ರತಿಧ್ವನಿಸುತ್ತಲೇ ಇದೆ. ಶ್ರೀಲಂಕಾ ಸಂಗೀತದ ಮಾಧುರ್ಯದ ಬನಿ ಯೊಹಾನಿ ಕಂಠದಿಂದ ಹೊರಹೊಮ್ಮುತ್ತಲೇ ಇದೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65